# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 25.09.2020 ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2020ನೇ ಸಾಲಿನ ಚತುರ್ಥ ಸಾಮಾನ್ಯ ಸಭೆಯ ನಡವಳಿಗಳು.**

**ಉಪಸ್ಥಿತರು**

**ಅನುಪಸ್ಥಿತರು**

**ಪ್ರಾರಂಭಿಕ**

ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

ಸಿಂಡಿಕೇಟು ಸಭೆಯ ನಿರ್ಣಯಗಳನ್ನು ತಕ್ಷಣದಲ್ಲೇ ದಾಖಲಿಸಿ, ಪಾರದರ್ಶಕತೆಯನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ದಾಖಲಿಸಿದ ನಿರ್ಣಯಗಳನ್ನು ಎಲ್ಲಾ ಸಿಂಡಿಕೇಟು ಸದಸ್ಯರ ವೀಕ್ಷಣೆಗಾಗಿ ಪ್ರೊಜೆಕ್ಟರ್ ವ್ಯವಸ್ಥೆಯನ್ನು ಅಳವಡಿಸಲು ಕ್ರಮ ಕೈಗೊಂಡಿರುವುದಕ್ಕೆ ಮಾನ್ಯ ಕುಲಪತಿಗಳಿಗೆ ಮತ್ತು ಇತರೇ ಅಧಿಕಾರಿಗಳಿಗೆ ಎಲ್ಲಾ ಮಾನ್ಯ ಸಿಂಡಿಕೇಟು ಸದಸ್ಯರುಗಳು ಸರ್ವಾನುಮತದಿಂದ ತಮ್ಮ ಅಭಿನಂದನೆಗಳನ್ನು ಸಲ್ಲಿಸಿದರು.

## I. ನಡವಳಿಗಳ ದೃಢೀಕರಣ

ದಿನಾಂಕ 30.07.2020ರಂದು ನಡೆದ 2020ನೇ ಸಾಲಿನ ತೃತೀಯ ವಿಶೇಷ ಸಭೆಯ ನಡವಳಿಗಳ ದೃಢೀಕರಣ ಈ ಕೆಳಗಿನಹೆಚ್ಚುವರಿ ನಿರ್ಣಯಗಳೊಂದಿಗೆ ಅನುಮೋದಿಸಲಾಯಿತು.

1. **ಕಾರ್ಯಸೂಚಿ ಸಂಖ್ಯೆ: ಡಿಇವಿ:ವಿ.ಸ.3:02(2020)**
**ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ e-Governance ಜಾರಿಗೆ ಸಂಬಂಧಿಸಿದ ಹಾಲಿ ಯೋಜನೆಗಳ ಬಗ್ಗೆ.**

ಮೇಲಿನ ಕಾರ್ಯಸೂಚಿಗೆ ಹೆಚ್ಚುವರಿಯಾಗಿ ಈ ಕೆಳಗಿನ ನಿರ್ಣಯವನ್ನು ಕೈಗೊಳ್ಳಲಾಯಿತು.

ಸಮಿತಿಯ ಅಧ್ಯಕ್ಷರಾದ ಪ್ರೊ. ಕರುಣಾಕರ್ ಎ. ಕೋಟೆಗಾರ್, ಸಿಂಡಿಕೇಟು ಸದಸ್ಯರು ಇವರು ವರದಿಯನ್ನು ಸಲ್ಲಿಸಲು ಒಂದು ತಿಂಗಳ ಹೆಚ್ಚುವರಿ ಕಾಲಾವಧಿಯ ವಿಸ್ತರಣೆಯನ್ನು ಅಪೇಕ್ಷಿಸಿದ ಹಿನ್ನೆಲೆಯಲ್ಲಿ ಒಂದು ತಿಂಗಳ ಕಾಲಾವಧಿಯನ್ನು ಹೆಚ್ಚುವರಿಯಾಗಿ ನೀಡಲು ಸಭೆಯು ನಿರ್ಣಯಿಸಿತು. ಮುಂದುವರಿದು,ತನಿಖೆಗೆ ಸಹಕರಿಸಲು ಸಿಂಡಿಕೇಟು ಸದಸ್ಯರಾದ ಶ್ರೀ ವಿವೇಕಾನಂದ ಪನಿಯಾಲ ಇವರನ್ನು ವಿಶೇಷ ಆಹ್ವಾನಿತರನ್ನಾಗಿ ಸಭೆಗೆ ಆಹ್ವಾನಿಸಿ ಸದರಿಯವರ ಸೇವೆಯನ್ನು ಪಡೆಯಲು ಅನುಮತಿಯನ್ನು ನೀಡಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

2. **ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ವಿ.ಸ.3:07(2020)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಅಳವಡಿಸಲಾಗಿರುವ ಸಿ.ಸಿ.ಟಿ.ವಿ ಮತ್ತು ಬಯೋಮೆಟ್ರಿಕ್ ಹಾಗೂ ಸೋಲಾರ್ ಉಪಕರಣಗಳ ಪ್ರಕ್ರಿಯೆ, ಕಾರ್ಯಕ್ಷಮತೆ ಹಾಗೂ ಇದಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಆಂತರಿಕ ಪರಿಶೀಲನಾ ಸಮಿತಿಯು ಪರಿಶೀಲನೆ ನಡೆಸಿ ಸಲ್ಲಿಸಿದ ವರದಿಯ ಬಗ್ಗೆ.

**ಮೇಲಿನ ಕಾರ್ಯಸೂಚಿಯ ನಿರ್ಣಯಕ್ಕೆ ಮುಂದುವರಿಕೆಯಾಗಿ ಈ ಕೆಳಗಿನ ಅಂಶಗಳನ್ನು ಸೇರಿಸಲಾಯಿತು.**

ಪ್ರಕ್ರಿಯೆಯಲ್ಲಿ ಒಳಗೊಂಡ ಎಲ್ಲಾ ಅಧಿಕಾರಿಗಳು, ಸಿಬ್ಬಂದಿ, ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ನೋಟೀಸು ಜಾರಿ ಮಾಡಿ ಪ್ರಕರಣದ ಕುರಿತು ಎಲ್ಲಾ ಆಯಾಮಗಳಿಂದ ಸಮಗ್ರವಾದ ವಿಚಾರಣೆ / ತನಿಖೆ ನಡೆಸಲು ಸಿಂಡಿಕೇಟು ಸದಸ್ಯರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಪುನರ್ರಚನೆ ಮಾಡಲು ಹಾಗೂ ಅದರ ಕಾರ್ಯವ್ಯಾಪ್ತಿಯನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಿ, ನಮೂದಿಸಲು ಸಿಂಡಿಕೇಟು ಸರ್ವಾನುಮತದಿಂದನಿರ್ಣಯಿಸಿತು.

## II. ಅನುಸರಣಾ ವರದಿಯ ಅನುಮೋದನೆ

1. ದಿನಾಂಕ 23.06.2020ರಂದು ನಡೆದ ಸಿಂಡಿಕೇಟಿನ 2020ನೇ ಸಾಲಿನ ದ್ವಿತೀಯ ಸಾಮಾನ್ಯ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.

   **– ಅನುಮೋದಿಸಲಾಯಿತು.–**

2. ದಿನಾಂಕ 14.07.2020ರಂದು ನಡೆದ ಸಿಂಡಿಕೇಟಿನ 2020ನೇ ಸಾಲಿನ ತೃತೀಯ ಸಾಮಾನ್ಯ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.

   - ಅನುಸರಣಾ ವರದಿಯ ಕ್ರಮ ಸಂಖ್ಯೆ 7ರಲ್ಲಿನ ಕಾರ್ಯಸೂಚಿ ಸಂಖ್ಯೆ ಕಾನೂನುಘಟಕ ಸಾಸ3:07 (2020) ರ ಅನುಸರಣಾ ವರದಿಗೆ ಸಂಬಂಧಿಸಿ, ಸದರಿಯವರು ನೀಡಿರುವ ವಿವರಣೆಗಳು ಸಮಂಜಸ ಮತ್ತು ತೃಪ್ತಿಕರವಾಗಿಲ್ಲದಿರುವುದರಿಂದ ಈ ಬಗ್ಗೆ ವಿಸ್ತೃತವಾದ ವಿವರಗಳನ್ನು ಮುಂದಿನ ಸಿಂಡಿಕೇಟು ಸಭೆಗೆ ನೀಡುವಂತೆ ಸಿಂಡಿಕೇಟು ತೀರ್ಮಾನಿಸಿತು.
   - ಅನುಸರಣಾ ವರದಿಯ ಕ್ರಮ ಸಂಖ್ಯೆ 9ರಲ್ಲಿನ ಕಾರ್ಯಸೂಚಿ ಸಂಖ್ಯೆ ಸಿಂಡಿಕೇಟ್ ಸಾಸ3:09 (2020) ರ ಅನುಸರಣಾ ವರದಿಗೆ ಸಂಬಂಧಿಸಿ,ವಿಸ್ತೃತ ವಿವರಣೆಯೊಂದಿಗೆ ಗಣಕೀಕರಣದ ವಿವರಗಳನ್ನು ಮುಂದಿನ ಸಿಂಡಿಕೇಟು ಸಭೆಗೆ ಸಲ್ಲಿಸುವುದಾಗಿ ಕುಲಸಚಿವರು (ಪರೀಕ್ಷಾಂಗ) ತಿಳಿಸಿದರು.
   - ಅನುಸರಣಾ ವರದಿಯ ಕ್ರಮ ಸಂಖ್ಯೆ 18 ರಲ್ಲಿನ ಕಾರ್ಯಸೂಚಿ ಸಂಖ್ಯೆ ಆಡಳಿತ ಸಾಸ3:18 (2020) ರ ಅನುಸರಣಾ ವರದಿಗೆ ಸಂಬಂಧಿಸಿ, ಅನುಸರಣಾ ವರದಿಯು ಅಪೂರ್ಣವಾಗಿದ್ದು ಯಾರು ಯಾರಿಗೆ ನೋಟೀಸ್ ನೀಡಲಾಗಿದೆ ಎಂಬ ವಿವರಗಳನ್ನು ಮುಂದಿನ ಸಿಂಡಿಕೇಟು ಸಭೆಗೆ ನೀಡುವಂತೆ ತಿಳಿಸಲಾಯಿತು.

## III. ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು

| | |
|---|---|
| **ಕಾರ್ಯಸೂಚಿ ಸಂಖ್ಯೆ:** | **ಎಸಿಸಿ:ಸಾ.ಸ.4:01(2020)** |
| **ವಿಷಯ:** | ಡಾ. ಎಂ. ವಿ. ಶೆಟ್ಟಿ ಕಾಲೇಜ್ ಆಫ್ ಸೋಶಿಯಲ್ ವರ್ಕ್, ಮಂಗಳೂರು ಎಂಬ ವಿದ್ಯಾಸಂಸ್ಥೆಯ ಹೆಸರು ಬದಲಾವಣೆ ಕುರಿತು. |
| **ನಿರ್ಣಯ:** | ಸದರಿ ವಿದ್ಯಾಸಂಸ್ಥೆಯ ಹೆಸರನ್ನು "ಡಾ. ಎಂ. ವಿ. ಶೆಟ್ಟಿ ಇನ್ಸ್ಟಿಟ್ಯೂಟ್ ಆಫ್ ಪ್ರೊಫೆಷನಲ್ ಸಾಯನ್ಸಸ್ ಆಂಡ್ ಮೆನೇಜ್‌ಮೆಂಟ್" ಎಂದು ಬದಲಾವಣೆ ಮಾಡುವ ಬಗ್ಗೆ ಶೈಕ್ಷಣಿಕ ಮಂಡಳಿಯು ಮಾಡಿರುವ ಶಿಫಾರಸ್ಸನ್ನು ಪರಿಗಣಿಸಿ, ಈ ಬಗ್ಗೆ ಅನುಮತಿಗಾಗಿ ಸದರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ನಿರ್ಣಯಿಸಲಾಯಿತು. |

**ಕಾರ್ಯಸೂಚಿ ಸಂಖ್ಯೆ:** **ಎಸಿಸಿ:ಸಾ.ಸ.4:02(2020)**

**ವಿಷಯ:** ಮಂಗಳೂರಿನ ಬೋಂದೇಲ್‌ನಲ್ಲಿರುವ ಮಣೇಲ್ ಶ್ರೀನಿವಾಸ್ ನಾಯಕ್ ಮೆಮೋರಿಯಲ್ ಬೆಸೆಂಟ್ ಇನ್ಸ್ಟಿಟ್ಯೂಟ್ ಆಫ್ ಪೋಸ್ಟ್ ಗ್ರಾಜುಯೇಟ್ ಸ್ಟಡೀಸ್ ಎಂಬ ಕಾಲೇಜಿನ ಹೆಸರನ್ನು ಮಣೇಲ್ ಶ್ರೀನಿವಾಸ್ ನಾಯಕ್ ಇನ್ಸ್ಟಿಟ್ಯೂಟ್ ಆಫ್ ಮೇನೇಜ್‌ಮೆಂಟ್ ಎಂದು ಬದಲಾಯಿಸುವ ಕುರಿತು.

**ನಿರ್ಣಯ:** ಸದರಿ ವಿದ್ಯಾಸಂಸ್ಥೆಯ ಹೆಸರನ್ನು "ಮಣೇಲ್ ಶ್ರೀನಿವಾಸ್ ನಾಯಕ್ ಇನ್ಸ್ಟಿಟ್ಯೂಟ್ ಆಫ್ ಮೆನೇಜ್‌ಮೆಂಟ್, ಬೋಂದೆಲ್, ಮಂಗಳೂರು" ಎಂದು ಬದಲಾವಣೆ ಮಾಡುವ ಬಗ್ಗೆ ಶೈಕ್ಷಣಿಕ ಮಂಡಳಿಯು ಮಾಡಿರುವ ಶಿಫಾರಸ್ಸನ್ನು ಪರಿಗಣಿಸಿ, ಈ ಬಗ್ಗೆ ಅನುಮತಿಗಾಗಿ ಸದರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಎಸಿಸಿ:ಸಾ.ಸ.4:03(2020)**

**ವಿಷಯ:** ಗೋವಿಂದ ದಾಸ ಕಾಲೇಜು, ಸುರತ್ಕಲ್ ಈ ವಿದ್ಯಾಸಂಸ್ಥೆಯಲ್ಲಿ ಬಿ.ಬಿ.ಎ. ಕಾರ್ಯಕ್ರಮವನ್ನು ಪುನಃ ಪ್ರಾರಂಭಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಆಡಳಿತ ಸಾ.ಸ.4:04(2020)**

**ವಿಷಯ:** ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು, ಮಂಗಳೂರು ಇಲ್ಲಿನ ಸ್ನಾತಕೋತ್ತರ ತುಳು ಅಧ್ಯಯನ ವಿಭಾಗಕ್ಕೆ ಪೀಠೋಪಕರಣಗಳ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಡಿಇವಿ ಸಾ.ಸ.4:05(2020)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ICCM-2019ಗೌರವಾರ್ಥ ದತ್ತಿ ಉಪನ್ಯಾಸ ನಿಧಿ ಸ್ಥಾಪಿಸುವ ಬಗ್ಗೆ.

**ನಿರ್ಣಯ:** "ವಿಶೇಷ ಪ್ರಕರಣ"ವೆಂದು ಪರಿಗಣಿಸಿ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. ಇದನ್ನು ಪೂರ್ವೋದಾಹರಣೆಯೆಂದು (precedent) ಪರಿಗಣಿಸತಕ್ಕದ್ದಲ್ಲ ಎಂದು ಸ್ಪಷ್ಟಪಡಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಡಿಇವಿ ಸಾ.ಸ.4:06(2020)**

**ವಿಷಯ:** ಸಂತ ಜಾರ್ಜ್ ಪದವಿ ಪೂರ್ವ ಕಾಲೇಜು, ನೆಲ್ಯಾಡಿ ಇಲ್ಲಿನ ಕಟ್ಟಡದಲ್ಲಿ ಬಾಡಿಗೆ ಆಧಾರದಲ್ಲಿ ನಡೆಸುತ್ತಿರುವ ವಿಶ್ವವಿದ್ಯಾನಿಲಯ ಕಾಲೇಜು ನೆಲ್ಯಾಡಿ ಇದನ್ನು ಮುಂದುವರೆಸುವ ಬಗ್ಗೆ.

**ನಿರ್ಣಯ:** ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಿಬ್ಬಂದಿ ಸಾ.ಸ.4:07(2020)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೆಲೆಯಲ್ಲಿ Scientific Officerಹಾಗೂ Consultant ಗಳನ್ನು ನೇಮಿಸಿಕೊಳ್ಳುವ ಬಗ್ಗೆ.

**ನಿರ್ಣಯ:** ಹಣಕಾಸು ಅಧಿಕಾರಿಯವರ ಮತ್ತು ಕಾರ್ಯಕಾರಿ ಅಭಿಯಂತರರ ಕಛೇರಿಗಳಿಗೆ ತಲಾ

ಒಂದೊಂದು Consultant,ವಿಶ್ವವಿದ್ಯಾನಿಲಯದCARRT, ಮತ್ತು ಜೀವರಸಾಯನಶಾಸ್ತ್ರ ವಿಭಾಗಗಳಿಗೆ ತಲಾ ಒಂದೊಂದು Scientific Officer, ಎಂ.ಎಸ್ಸಿ. ಜೀವವಿಜ್ಞಾನ ವಿಭಾಗದ ಪ್ರಯೋಗಾಲಯಕ್ಕೆ ಅರ್ಹ ಅತಿಥಿ ಉಪನ್ಯಾಸಕರನ್ನು ಬಿಡುವು ರಜಾ ಅವಧಿಯ ಸಂಭಾವನೆಯೊಂದಿಗೆ ಹಾಗೂಕುಲಸಚಿವರು (ಪರೀಕ್ಷಾಂಗ) ವಿಭಾಗಕ್ಕೆ ಮೂರು ಜನ Consultantಗಳನ್ನು ನಿಯಮಾನುಸಾರ ತಾತ್ಕಾಲಿಕ ನೇಮಕಾತಿ ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಿ, ಸದರಿಯವರುಗಳಿಗೆ ಅರ್ಹತೆ, ತಜ್ಞತೆ ಹಾಗೂ ಅನುಭವದ ಆಧಾರದಲ್ಲಿ ಸೂಕ್ತ ಸಂಭಾವನೆಯನ್ನು ನಿಗದಿಪಡಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ ಸಾ.ಸ.4:08(2020)**

**ವಿಷಯ:** ವರ್ಗಾವಣೆ ನಿಮಿತ್ತ ವರ್ಗಾವಣೆ ಭತ್ಯೆ, ಪ್ರಯಾಣ ಭತ್ಯೆ, ಮತ್ತು ಸೇರಿಕೆ ಕಾಲದ ಮಂಜೂರಾತಿ ಬಗ್ಗೆ.

**ನಿರ್ಣಯ:** ವಿಸ್ತೃತವಾದ ಚರ್ಚೆಯ ಬಳಿಕ ಸದರಿಯವರ ಸೇರಿಕೆ ಕಾಲ, ವರ್ಗಾವಣೆ ಭತ್ಯೆ, ಪ್ರಯಾಣ ಭತ್ಯೆಗಳನ್ನು ಮಂಜೂರು ಮಾಡುವ ಪ್ರಸ್ತಾವನೆಯನ್ನು ಪರಿಗಣಿಸದಿರಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ ಸಾ.ಸ.4:09(2020)**

**ವಿಷಯ:** ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು ಮತ್ತು ದೂರಶಿಕ್ಷಣ ಕೇಂದ್ರ, ಮಂಗಳೂರು ಇಲ್ಲಿನ ಲೋಪದೋಷಗಳ ಬಗ್ಗೆ ಆಂತರಿಕ ಪರಿಶೀಲನಾ ಸಮಿತಿಯ ಪರಿಶೀಲನೆ ನಡೆಸಿ ಸಲ್ಲಿಸಿದ ವರದಿಯ ಬಗ್ಗೆ.

**ನಿರ್ಣಯ:** ಆಂತರಿಕ ಪರಿಶೀಲನಾ ಸಮಿತಿಯು ಸಲ್ಲಿಸಿದ ಪ್ರಾಥಮಿಕ ವರದಿಯನ್ನು ಸಿಂಡಿಕೇಟು ಗಮನಿಸಿತು. ಈ ಬಗ್ಗೆ ಸಮಗ್ರ ತನಿಖೆಯ ಅಗತ್ಯವಿರುವುದರಿಂದ ಇನ್ನೊಂದು ಸಮಿತಿಯನ್ನು ರಚಿಸಿ ಈ ಬಗ್ಗೆ ಕೂಲಂಕುಷವಾಗಿ ತನಿಖೆ ನಡೆಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸಿಂಡಿಕೇಟು ನಿರ್ಣಯಿಸಿತು.ಸಮಿತಿಯನ್ನು ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ: ಕಾನೂನುಘಟಕ ಸಾ.ಸ.4:10(2020)**

**ವಿಷಯ:** ರಿಟ್ ಅರ್ಜಿ ಸಂಖ್ಯೆ: 1652/2015 (ಎಸ್–ಆರ್ಇಎಸ್) ಗೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಸಲ್ಲಿಸಬೇಕಾಗಿರುವ ಆಕ್ಷೇಪಣಾ ಹೇಳಿಕೆಗಳ ಅನುಮೋದನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಕಾನೂನುಘಟಕ ಸಾ.ಸ.4:11(2020)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸಮಾಜಕಾರ್ಯದಲ್ಲಿ ಪ್ರಾಧ್ಯಾಪಕರಾಗಿ ನೇಮಕಾತಿ ಹೊಂದಿದ್ದ ಡಾ. ಪಿ. ಇಳಾಂಗೋ ಇವರಿಂದ 03 ತಿಂಗಳ ವೇತನವನ್ನು ವಸೂಲು ಮಾಡುವ ಬಗ್ಗೆ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮಂಗಳೂರು ಇಲ್ಲಿ ವಿಶ್ವವಿದ್ಯಾನಿಲಯವು ಹೂಡಿದ್ದ ದಾವೆ (Original Suit)ಸಂಖ್ಯೆ: 75/2019 ಗೆ ಸಂಬಂಧಿಸಿದಂತೆ ನ್ಯಾಯಾಲಯದ ತೀರ್ಪು ದಿನಾಂಕ 25.02.2020ನ್ನು ಕರ್ನಾಟಕ ರಾಜ್ಯ

ಉಚ್ಛ ನ್ಯಾಯಾಲಯದಲ್ಲಿ ಪ್ರಶ್ನಿಸುವ ಬಗ್ಗೆ.

**ನಿರ್ಣಯ:** ಪ್ರಕರಣದ ಎಲ್ಲಾ ಅಂಶಗಳನ್ನು ವಿಸ್ತೃತವಾಗಿ ಚರ್ಚಿಸಿ,ಈ ಪ್ರಕರಣವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ, ಮೇಲ್ಮನವಿ ಸಲ್ಲಿಸುವುದು ಸೂಕ್ತವಲ್ಲ ಎಂಬುದಾಗಿ ನಿರ್ಣಯಿಸಿಲಾಯಿತು.ಆದರೆ, ಇದನ್ನು ಪೂರ್ವೋದಾಹರಣೆಯೆಂದು(precedent) ಪರಿಗಣಿಸತಕ್ಕದ್ದಲ್ಲ ಎಂದು ಸ್ಪಷ್ಟಪಡಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಕಾನೂನುಘಟಕ ಸಾ.ಸ.4:12(2020)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಆಂಗ್ಲ ಭಾಷಾ ಪ್ರಾಧ್ಯಾಪಕರಾಗಿ ನೇಮಕಾತಿ ಹೊಂದಿದ್ದ ಡಾ. ರಾಮಚಂದ್ರ ಗಜಾನನ ಹೆಗ್ಡೆ ಇವರಿಂದ 03 ತಿಂಗಳ ವೇತನವನ್ನು ವಸೂಲು ಮಾಡುವ ಬಗ್ಗೆ ಮೊದಲ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮಂಗಳೂರು ಇಲ್ಲಿ ವಿಶ್ವವಿದ್ಯಾನಿಲಯವು ಹೂಡಿದ್ದ ದಾವೆ (Original Suit)ಸಂಖ್ಯೆ: 76/2019 ಗೆ ಸಂಬಂಧಿಸಿದಂತೆ ನ್ಯಾಯಾಲಯದ ತೀರ್ಪು ದಿನಾಂಕ 26.02.2020ನ್ನು ಪ್ರಶ್ನಿಸಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮಂಗಳೂರು ಇಲ್ಲಿ ದಾವೆ (Regular Appeal)ಹೂಡುವ ಬಗ್ಗೆ.

**ನಿರ್ಣಯ:** ಪ್ರಕರಣದ ಎಲ್ಲಾ ಅಂಶಗಳನ್ನು ವಿಸ್ತೃತವಾಗಿ ಚರ್ಚಿಸಿ,ಈ ಪ್ರಕರಣವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ, ಮೇಲ್ಮನವಿ ಸಲ್ಲಿಸುವುದು ಸೂಕ್ತವಲ್ಲ ಎಂಬುದಾಗಿ ನಿರ್ಣಯಿಸಿಲಾಯಿತು.ಆದರೆ, ಇದನ್ನು ಪೂರ್ವೋದಾಹರಣೆಯೆಂದು(precedent) ಪರಿಗಣಿಸತಕ್ಕದ್ದಲ್ಲ ಎಂದು ಸ್ಪಷ್ಟಪಡಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಕಾನೂನುಘಟಕ ಸಾ.ಸ.4:13(2020)**

**ವಿಷಯ:** ಡಾ. ಗೋಪಿನಾಥ್, ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು ಜೈವಿಕ ತಂತ್ರಜ್ಞಾನ ವಿಭಾಗ, ಆಚಾರ್ಯ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು ಇವರು ಮಂಗಳೂರು ವಿಶ್ವವಿದ್ಯಾನಿಲಯ ಮತ್ತು ಡಾ. ಕೆ. ಸಿ. ಪುಷ್ಪಲತಾ, ಸಹ ಪ್ರಾಧ್ಯಾಪಕರು, ಸ್ನಾತಕೋತ್ತರ ಸೂಕ್ಷ್ಮಾಣು ಜೀವವಿಜ್ಞಾನ ವಿಭಾಗ, ಸ್ನಾತಕೋತ್ತರ ಕೇಂದ್ರ ಚಿಕ್ಕ ಅಳುವಾರ, ಕೊಡಗು ಜಿಲ್ಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ಹೂಡಿರುವ ರಿಟ್ ಅರ್ಜಿ ಸಂಖ್ಯೆ: 59476/2014 (ಎಸ್) ಗೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಸಲ್ಲಿಸಬೇಕಾಗಿರುವ ಆಕ್ಷೇಪಣಾ ಹೇಳಿಕೆಗಳ ಅನುಮೋದನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿಸಂಖ್ಯೆ:** **ಎಸಿಸಿ:ಸಾ.ಸ.4:14(2020)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ (National Education Policy) ಯನ್ನು ಅಳವಡಿಸಿಕೊಳ್ಳುವ ಬಗ್ಗೆ.

**ನಿರ್ಣಯ:** ರಾಷ್ಟ್ರೀಯ ಶಿಕ್ಷಣ ನೀತಿ– 2020 ರ ಬಗ್ಗೆ ಮಾನ್ಯ ಕುಲಪತಿಗಳು ಸುಧೀರ್ಘವಾಗಿ ವಿವರಣೆ ನೀಡಿದರು.ರಾಷ್ಟ್ರೀಯ ಶಿಕ್ಷಣ ನೀತಿ – 2020 ನ್ನು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪರಿಣಾಮಕಾರಿಯಾಗಿ ಅಳವಡಿಸುವ ಬಗ್ಗೆ ಮತ್ತು ಇದರ ಬಗ್ಗೆ

ತಮ್ಮ ಕನಸುಗಳನ್ನು ಮಾನ್ಯ ಕುಲಪತಿಗಳು ಸಭೆಯ ಮುಂದೆ ಪ್ರಸ್ತುತ ಪಡಿಸಿದರು. ದೇಶದಲ್ಲಿ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಇದೊಂದು ಆಮೂಲಾಗ್ರ ಬದಲಾವಣೆ. ರಾಷ್ಟ್ರೀಯ ಶಿಕ್ಷಣ ನೀತಿ–2020 ನ್ನು ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನ ಮಾಡುವಲ್ಲಿ ನಮ್ಮ ಮಂಗಳೂರು ವಿಶ್ವವಿದ್ಯಾನಿಲಯವು ಪ್ರಥಮ ಸ್ಥಾನದಲ್ಲಿರಬೇಕೆಂದು ತಮ್ಮ ಆಶಯವನ್ನು ವ್ಯಕ್ತಪಡಿಸಿದರು. ಈ ನೀತಿಯು ಶಿಕ್ಷಣ ಮತ್ತು ಉದ್ಯೋಗಕ್ಕೆ ಕೇಂದ್ರೀಕೃತವಾಗಿದ್ದು, ಇದರ ಕಾರ್ಯವ್ಯಾಪ್ತಿ ಮತ್ತು ಉದ್ದೇಶಗಳ ಬಗ್ಗೆ ವಿಸ್ತೃತವಾಗಿ ವಿವರಿಸಿದರು.

Task Force ಗೆ ಸಂಬಂಧಿಸಿ, ಒಟ್ಟು ಒಂಭತ್ತು ಸಿಂಡಿಕೇಟಿನ ಉಪಸಮಿತಿಗಳನ್ನು ರಚಿಸಲು ನಿರ್ಣಯಿಸಲಾಯಿತು.

1. ಶೈಕ್ಷಣಿಕ ಸುಧಾರಣಾ ಸಮಿತಿ (Academic Reforms Committee)
2. ಪರೀಕ್ಷಾಂಗ ಸುಧಾರಣಾ ಸಮಿತಿ (ExaminationReforms Committee)
3. ಹಣಕಾಸು ಸುಧಾರಣಾ ಸಮಿತಿ (Finance Reforms Committee)
4. ಅಭಿವೃದ್ಧಿ ಸುಧಾರಣಾ ಸಮಿತಿ(Development Reforms Committee)
5. ಮಾನವ ಸಂಪನ್ಮೂಲ ಸುಧಾರಣಾ ಸಮಿತಿ (Human Resources Reforms Committee)
6. ಬಾಹ್ಯ ಚಟುವಟಿಕೆಗಳ ಸುಧಾರಣಾ ಸಮಿತಿ (Extension and Outreach activitiesCommittee)
7. ಕ್ರೀಡೆ ಮತ್ತು ಸಾಂಸ್ಕೃತಿಕ ಸುಧಾರಣಾ ಸಮಿತಿ (Sports and Cultural Policy Committee)
8. ನ್ಯಾಕ್, ರ್‍ಯಾಂಕಿಂಗ್ ಬ್ರ್ಯಾಂಡಿಂಗ್ ಮತ್ತು ಪ್ರಸಾರಾಂಗಸುಧಾರಣಾ ಸಮಿತಿ (NAAC/Ranking/Branding/Publication committee)
9. ಆಡಳಿತಾ ಸುಧಾರಣಾ ಸಮಿತಿ (Administrative Reforms committee)

ಮೇಲ್ಕಂಡ ಉಪಸಮಿತಿಗಳಿಗೆ ಈ ಕೆಳಗಿನ ಸಿಂಡಿಕೇಟು ಸದಸ್ಯರುಗಳನ್ನು ಅಧ್ಯಕ್ಷರುಗಳನ್ನಾಗಿ ನಾಮನಿರ್ದೇಶನ ಮಾಡಲಾಯಿತು.

1. ಶೈಕ್ಷಣಿಕ ಸುಧಾರಣಾ ಸಮಿತಿ – ಪ್ರೊ. ಕರುಣಾಕರ್ ಎ. ಕೋಟೆಗಾರ್
2. ಪರೀಕ್ಷಾಂಗ ಸುಧಾರಣಾ ಸಮಿತಿ – ಡಾ. ಎಂ. ಎಸ್. ತಳವಾರ್
3. ಹಣಕಾಸು ಸುಧಾರಣಾ ಸಮಿತಿ – ಶ್ರೀ ಮೋಹನ್ ಪಡಿವಾಳ್
4. ಅಭಿವೃದ್ಧಿ ಸುಧಾರಣಾ ಸಮಿತಿ – ಶ್ರೀ ಮೋಹನ್ ಪಡಿವಾಳ್
5. ಮಾನವ ಸಂಪನ್ಮೂಲ ಸುಧಾರಣಾ ಸಮಿತಿ – ಕುಲಪತಿಗಳಿಂದ ನಾಮನಿರ್ದೇಶಿತರಾದ ಡೀನರು
6. ಬಾಹ್ಯ ಚಟುವಟಿಕೆಗಳ ಸುಧಾರಣಾ ಸಮಿತಿ – ಶ್ರೀ ಕೆ. ರಮೇಶ್

7. ಕ್ರೀಡೆ ಮತ್ತು ಸಾಂಸ್ಕೃತಿಕ ಸುಧಾರಣಾ ಸಮಿತಿ – ಶ್ರೀ ರವೀಂದ್ರನಾಥ ರೈ
8. ನ್ಯಾಕ್, ರ್‍ಯಾಂಕಿಂಗ್ ಬ್ರಾಂಡಿಂಗ್ ಮತ್ತು ಪ್ರಸಾರಾಂಗ ಸುಧಾರಣಾ ಸಮಿತಿ – ಡಾ. ಪಾರ್ವತಿ ಅಪ್ಪಯ್ಯ
9. ಆಡಳಿತಾ ಸುಧಾರಣಾ ಸಮಿತಿ – ಶ್ರೀ ವಿವೇಕಾನಂದ ಪನಿಯಾಲ

ಉಪಸಮಿತಿಗಳ ಅಧ್ಯಕ್ಷರುಗಳೆಲ್ಲರೂ Task Force ನ ಸದಸ್ಯರುಗಳಾಗಿದ್ದು,Task Force ಗೆ ಈ ಕೆಳಗಿನ ತಜ್ಞರು(Honorary Advisors)ಗಳನ್ನು ಗೌರವಾನ್ವಿತ ಸಲಹೆಗಾರರನ್ನಾಗಿ ನೇಮಿಸಿಕೊಳ್ಳಬಹುದೆಂಬುದಾಗಿ ನಿರ್ಣಯಿಸಲಾಯಿತು.

1. ಪ್ರೊ. ಪಿ. ವಿ. ಕೃಷ್ಣ ಭಟ್
2. ಪ್ರೊ. ಚ.ನ. ಶಂಕರರಾವ್
3. ಪ್ರೊ. ಬಿ. ಎ. ವಿವೇಕ ರೈ

ಸದರಿ ಸಮಿತಿಗಳಿಗೆ ಮಂಗಳೂರು ವಿಶ್ವವಿದ್ಯಾನಿಲಯದ ಎಲ್ಲಾ ನಿಕಾಯಗಳ ಡೀನರುಗಳು, ಶೈಕ್ಷಣಿಕ ಮಂಡಳಿ ಸದಸ್ಯರುಗಳು, ಯೋಜನೆ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ, IQAC, ಕಾಲೇಜು ಅಭಿವೃದ್ಧಿ ಮಂಡಳಿಗಳ ನಿರ್ದೇಶಕರುಗಳು, Mangala Alumni Association, MUTA, AMUCT, ಇವುಗಳ ಪ್ರತಿನಿಧಿಗಳು,ಕುಲಸಚಿವರು (ಪರೀಕ್ಷಾಂಗ) ಮತ್ತು ಹಣಕಾಸು ಅಧಿಕಾರಿ ಇವರುಗಳನ್ನು ಸಮಿತಿಗಳ ಅಗತ್ಯಕ್ಕೆ ತಕ್ಕಂತೆ ವಿಶೇಷ ಆಹ್ವಾನಿತರುಗಳನ್ನಾಗಿ ಸಭೆಗಳಿಗೆ ಆಹ್ವಾನಿಸುವಂತೆ ಕ್ರಮ ಕೈಗೊಳ್ಳಬಹುದೆಂಬುದಾಗಿ ನಿರ್ಣಯಿಸಲಾಯಿತು.

ಸಿಂಡಿಕೇಟು ಸದಸ್ಯರಾದ ಪ್ರೊ. ಕರುಣಾಕರ ಎ. ಕೋಟೆಗಾರ್ ಇವರು ಈ ಬಗ್ಗೆ ಪೂರಕವಾದ ವಿವರಣೆಗಳನ್ನು ನೀಡಿದರು. ಇದರ ಬಗ್ಗೆ 2 ಹಂತಗಳಲ್ಲಿ ಒಂದು ದಿನದ ಕಾರ್ಯಾಗಾರವನ್ನು ವಿಶ್ವವಿದ್ಯಾನಿಲಯದಲ್ಲಿ ನಡೆಸಿ, ಮೂರು ತಿಂಗಳಿಗೊಮ್ಮೆ ವರದಿಯನ್ನು ಪರಿಶೀಲಿಸಬೇಕೆಂದು ತಿಳಿಸಲಾಯಿತು. ಅಂತಿಮವಾಗಿ ಈ ಬಗ್ಗೆ ವಿವಿಧ ಸಮಿತಿಗಳನ್ನು ರಚಿಸಿ, ರಾಷ್ಟ್ರೀಯ ಶಿಕ್ಷಣ ನೀತಿ–2020(National Education Policy-2020) ಯನ್ನು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪರಿಣಾಮಕಾರಿಯಾಗಿ ಅಳವಡಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ನಿರ್ಣಯಿಸಲಾಯಿತು. ಸಮಿತಿಗಳನ್ನು ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಪರೀಕ್ಷಾಂಗ:ಸಾ.ಸ.4:15(2020)**

**ವಿಷಯ:** ಶ್ರೀ. ಸತೀಶ್‌ಕುಮಾರ್ ಕೆ., ಕಾನೂನು ಪದವಿಯ ವಿದ್ಯಾರ್ಥಿ, ವೈಕುಂಠ ಬಾಳಿಗ ಕಾನೂನು ಮಹಾವಿದ್ಯಾನಿಲಯ, ಉಡುಪಿ, ಇವರ ಅಂಕಪಟ್ಟಿ ತಿದ್ದುಪಡಿ ಮಾಡುವ ಬಗ್ಗೆ.

**ನಿರ್ಣಯ:** ಶೈಕ್ಷಣಿಕ ಮಂಡಳಿ ಸಭೆಯ ನಿರ್ಣಯವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಎಸಿಸಿ:ಸಾ.ಸ.4:16(2020)**

**ವಿಷಯ:** ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇಲ್ಲಿ ಶೈಕ್ಷಣಿಕ ವರ್ಷ

2020–21ನೇ ಸಾಲಿನಿಂದ Certificate Course in Yogic Science ಕಾರ್ಯಕ್ರಮವನ್ನು ಪ್ರಾರಂಭಿಸುವ ಬಗ್ಗೆ.

**ನಿರ್ಣಯ:** ಸರ್ಟಿಫಿಕೇಟ್ ಕಾರ್ಯಕ್ರಮಗಳಿಗೆ ಯುಜಿಸಿ ನಿಯಮಾವಳಿಯಂತೆ ವಿದ್ಯಾರ್ಹತೆಯನ್ನು 10+2 ಎಂದು ನಮೂದಿಸುವಂತೆ ತಿಳಿಸಿ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಎಸಿಸಿ:ಸಾ.ಸ.4:17(2020)**

**ವಿಷಯ:** ಸಂಯೋಜಿತ/ಸ್ವಾಯತ್ತ ಕಾಲೇಜುಗಳಲ್ಲಿ ನಡೆಸಲ್ಪಡುವ ಸ್ನಾತಕ/ಸ್ನಾತಕೋತ್ತರ ಕೋರ್ಸುಗಳಿಗೆ ಹೆಚ್ಚುವರಿ ವಿದ್ಯಾರ್ಥಿ ಪರಿಮಿತಿ ಮಂಜೂರು ಮಾಡುವ ಬಗ್ಗೆ.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜಿತ / ಸ್ವಾಯತ್ತ ಕಾಲೇಜುಗಳಲ್ಲಿ ನಡೆಸಲ್ಪಡುವ ಎಲ್ಲಾ ಸ್ನಾತಕ ಪದವಿ ಕಾರ್ಯಕ್ರಮಗಳಿಗೆ ಸಂಬಂಧಿಸಿ, ಹೆಚ್ಚುವರಿ ವಿದ್ಯಾರ್ಥಿ ಪರಿಮಿತಿ ಮತ್ತುಹೆಚ್ಚುವರಿ ವಿಭಾಗದ ಅನುಮತಿಗೆ ಸಂಬಂಧಿಸಿ, ಶೈಕ್ಷಣಿಕ ಮಂಡಳಿಯು ಮಾಡಿರುವ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಸ್ನಾತಕೋತ್ತರ ಕಾರ್ಯಕ್ರಮಗಳ ಹೆಚ್ಚುವರಿ ವಿದ್ಯಾರ್ಥಿ ಪರಿಮಿತಿಗೆ ಸಂಬಂಧಿಸಿ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಲು ಸೂಕ್ತ ಕ್ರಮ ಕೈಗೊಳ್ಳಬಹುದೆಂಬುದಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಿಬ್ಬಂದಿ:ಸಾ.ಸ.4:18(2020)**

**ವಿಷಯ:** ಪ್ರೊ. ಡಿ. ಶಿವಲಿಂಗಯ್ಯ, ಪ್ರಾಧ್ಯಾಪಕರು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರಿಗೆ ವಿಶ್ವವಿದ್ಯಾನಿಲಯದ ಸೇವೆಯಿಂದ ಸ್ವಯಂ ನಿವೃತ್ತಿ ಹೊಂದಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಾರ್ವತ್ರಿಕ ಸಾ.ಸ.4:19(2020)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಅಂತರಾಷ್ಟ್ರೀಯ ವಿದ್ಯಾರ್ಥಿಗಳು ವಾಸ್ತವ್ಯವಿರುವ ಕಾಜವ ಪ್ಲೇಸ್ ವಸತಿನಿಲಯದ ಬಾಕಿ ಉಳಿದಿರುವ ಲೈಸೆನ್ಸ್ ಫೀ ಪಾವತಿ ಮಾಡುವ ಬಗ್ಗೆ ಹಾಗೂ ಮುಂದಿನ ಅವಧಿಗೆ ಕರಾರು ಒಪ್ಪಂದವನ್ನು ಮುಂದುವರಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಾರ್ವತ್ರಿಕ ಸಾ.ಸ.4:20(2020)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಅಂತರಾಷ್ಟ್ರೀಯ ವಿದ್ಯಾರ್ಥಿಗಳು ವಾಸ್ತವ್ಯವಿರುವ ವೆಂಕಟ್ ರೆಸಿಡೆನ್ಸಿ ವಸತಿನಿಲಯದ ಬಾಕಿ ಉಳಿದಿರುವ ಲೈಸೆನ್ಸ್ ಫೀ ಪಾವತಿ ಮಾಡುವ ಬಗ್ಗೆ ಹಾಗೂ ಮುಂದಿನ ಅವಧಿಗೆ ಕರಾರು ಒಪ್ಪಂದವನ್ನು ಮುಂದುವರಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಪ.ಜಾ.ಪ.ಪಂ. ಘಟಕ ಸಾ.ಸ.4:21(2020)**

**ವಿಷಯ:** ಪರಿಶಿಷ್ಟ ಜಾತಿ / ಪಂಗಡದ ದ್ವಿತೀಯ ವರ್ಷದ ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ ವಿತರಿಸಲು M/s. Keonics ಸಂಸ್ಥೆಯವರಿಂದ

ಲ್ಯಾಪ್‌ಟಾಪ್ ಖರೀದಿಸುವ ಬಗ್ಗೆ.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ ಈಗಾಗಲೇ M/s. Keonics ಸಂಸ್ಥೆಯವರಿಂದ ಲ್ಯಾಪ್‌ಟಾಪ್ ಖರೀದಿಸಲಾಗಿದ್ದು, ಬಿಲ್ಲಿನ ಮೊತ್ತ ರೂ. 99,20,611.00 (ರೂಪಾಯಿ ತೊಂಬತ್ತೊಂಬತ್ತು ಲಕ್ಷದ ಇಪ್ಪತ್ತು ಸಾವಿರದ ಆರು ನೂರ ಹನ್ನೊಂದು ಮಾತ್ರ) ದಲ್ಲಿ ಶೇಕಡಾ 75ರಷ್ಟನ್ನು ಪಾವತಿಸಲು ಸೂಕ್ತ ಕ್ರಮಕೈಗೊಳ್ಳಬಹುದೆಂಬುದಾಗಿ ನಿರ್ಣಯಿಸಲಾಯಿತು. ಉಳಿದಂತೆ, ಖರೀದಿಸಿರುವ ಲ್ಯಾಪ್‌ಟಾಪ್‌ಗಳ configuration ಖರೀದಿ ಪ್ರಸ್ತಾವನೆಯಲ್ಲಿ ನಮೂದಿಸಿರುವಂತೆ ಇದೆಯೇ ಎಂಬ ಬಗ್ಗೆ ತಾಂತ್ರಿಕ ಸಮಿತಿಯಿಂದ ಪರಿಶೀಲಿಸಿ ವರದಿ ಪಡೆದು ಸಮಗ್ರ ಪ್ರಕ್ರಿಯೆಯ ಬಗ್ಗೆ ವರದಿಯನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ಸೂಕ್ತ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಿಬ್ಬಂದಿ:ಸಾ.ಸ.4:22(2020**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕ ನೇಮಕಾತಿ / ಹುದ್ದೆಯ ಪ್ರಭಾರವನ್ನು ನೀಡುವ ಬಗ್ಗೆ.

**ನಿರ್ಣಯ:** ಡಾ. ಮಂಜುಳಾ ಶಾಂತಾರಾಮ್, ಪ್ರಾಧ್ಯಾಪಕರು, ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ''ಜ್ಞಾನಕಾವೇರಿ'', ಚಿಕ್ಕ ಅಳುವಾರ ಇವರಿಗೆಮುಂದಿನ ಆರು ತಿಂಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ವಿದ್ಯಾರ್ಥಿ ಕ್ಷೇಮಪಾಲನೆಯ ನಿರ್ದೇಶಕರ ಪ್ರಭಾರವನ್ನು ನೀಡಬಹುದೆಂಬುದಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಿಂಡಿಕೇಟ್:ಸಾ.ಸ.4:23(2020)**

**ವಿಷಯ:** ಡಾ. ಪಾರ್ವತಿ ಅಪ್ಪಯ್ಯ, ಸಿಂಡಿಕೇಟು ಸದಸ್ಯರು, ಇವರು ಸಲ್ಲಿಸಿರುವ ಪ್ರಸ್ತಾವನೆ ಕುರಿತು.

1. ಕೊಡವ Diploma / Certificate and Advanced Diplomaಕೋರ್ಸುಗಳನ್ನು ಕಾಲೇಜುಗಳಲ್ಲಿ ಅಳವಡಿಸುವ ಬಗ್ಗೆ.

   **ನಿರ್ಣಯ:** ಅನುಮೋದಿಸಲಾಯಿತು

2. ಹಳೆ ವಿದ್ಯಾರ್ಥಿ ಸಂಘ, ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ, ಕಾಲೇಜು, ಒಂದು ಕೊಠಡಿಯನ್ನು ಕಾಲೇಜಿನ ಹಳೆಯ ವಿದ್ಯಾರ್ಥಿ ಸಂಘದ ಸಭೆ / ಕಚೇರಿಯ ಉಪಯೋಗಕ್ಕಾಗಿ ಕಟ್ಟುವ ಬಗ್ಗೆ.

   **ನಿರ್ಣಯ:** ಸೂಕ್ತ ಷರತ್ತುಗಳ ಮೇಲೆ ವಿಶ್ವವಿದ್ಯಾನಿಲಯದ ಹಿತಾಸಕ್ತಿಯನ್ನು ಕಾಪಾಡಿಕೊಂಡು ಕಟ್ಟಡವನ್ನು ಕಟ್ಟಲು ಅನುಮತಿ ನೀಡಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** **ಸಿಂಡಿಕೇಟ್:ಸಾ.ಸ.4:24(2020)**

**ವಿಷಯ:** Introduction of 4 years integrated teacher EducationBA Ed, BSc. Ed., programme in University College, Mangalore - reg

1. Introduction of 4 years integrated teacher Education BA Ed, BSc. Ed., programme in the curriculum of BA BSc. Under University College, Mangalore, a Constituent College of Mangalore University.

2. Constitution of an Expert Committee to workout modalities to design Staff Pattern, Curriculum Design, Regulations for the 4 year integrated Teacher Education Program.
3. Steps to be initiated for the recruitment of Teaching and Non-teaching staff for the Exhibition Department (M.Ed.)

**ನಿರ್ಣಯ:** ಈ ಬಗ್ಗೆ ಮುಂದಿನ ಕ್ರಮಕೈಗೊಳ್ಳಲು ಡಾ. ಎಂ. ಎಸ್. ತಳವಾರ್, ಮಾನ್ಯ ಸಿಂಡಿಕೇಟು ಸದಸ್ಯರು ಇವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಸೂಕ್ತ ಕ್ರಮ ಕೈಗೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟ್:ಸಾ.ಸ.4:25(2020)**

**ವಿಷಯ:** ಶ್ರೀ ರವಿಚಂದ್ರ ಪಿ. ಎಂ., ಸಿಂಡಿಕೇಟು ಸದಸ್ಯರು, ವಿಶ್ವವಿದ್ಯಾನಿಲಯ ಸುಧಾರಣೆ ಬಗ್ಗೆ ಸಲ್ಲಿಸಿರುವ ಪ್ರಸ್ತಾವನೆ ಕುರಿತು.

1. ಮಂಗಳೂರು ವಿಶ್ವವಿದ್ಯಾನಿಲಯ ಹೊಂದಿರುವ ಒಟ್ಟು ಜಮೀನಿನ ವಿವರ, ವಿಶ್ವವಿದ್ಯಾನಿಲಯದ ಜಾಗ ಕಾನೂನು ಬಾಹಿರ ಅತಿಕ್ರಮಣ ಹೊಂದಿದ್ದರೆ ಅದರ ವಿವರ, ಈ ಬಗ್ಗೆ ವಿಶ್ವವಿದ್ಯಾನಿಲಯದಿಂದ ಇಲ್ಲಿಯವರೆಗೆ ತೆಗೆದುಕೊಂಡಿರುವ ಉಪಕ್ರಮಗಳು ಹಾಗೂ ಮುಂದೆ ತೆಗೆದುಕೊಳ್ಳುವ ಉಪಕ್ರಮಗಳ ಬಗ್ಗೆ.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ಎಸ್ಟೇಟ್ ಆಫೀಸರ್‌ಗೆ ಇದರ ಜವಾಬ್ದಾರಿಯನ್ನು ವಹಿಸಿ, ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಕೊಣಾಜೆ, ವಿಶ್ವವಿದ್ಯಾನಿಲಯ ಕಾಲೇಜು ಆವರಣ, ಮಂಗಳೂರು,ಮಂಗಳೂರಿನ ಅಶೋಕನಗರ, ಎಫ್.ಎಂ.ಕೆ.ಎಂ.ಸಿ. ಕಾಲೇಜು, ಮಡಿಕೇರಿ, ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ, ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಬೆಳಪು, ಉಡುಪಿ ಮತ್ತು ನೆಲ್ಯಾಡಿಯ ಸ್ಥಿರಾಸ್ತಿಯನ್ನು ಸರ್ಕಾರಿ ಸರ್ವೇಯರ್‌ನಿಂದ ಅಧಿಕೃತವಾಗಿ ಅಳತೆ ಮಾಡಿಸಿ ಸ್ವಾಧೀನಕ್ಕೆ ಪಡೆದುಕೊಳ್ಳಲು ನಿರ್ಣಯಿಸಲಾಯಿತು. ಈ ಪ್ರಕ್ರಿಯೆಗೆ ಅಗತ್ಯವಿದ್ದಲ್ಲಿ ಖಾಸಗಿ ಸಂಸ್ಥೆಗಳಿಂದ ಸೇವೆಯನ್ನು ಪಡೆದುಕೊಳ್ಳುವ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

2. ವಿಶ್ವವಿದ್ಯಾನಿಲಯದಲ್ಲಿ ಕಳೆದ 2 ವರ್ಷದಿಂದ ವಿವಿಧ ವಿಷಯಗಳಿಗೆ ಸಂಬಂಧಪಟ್ಟಂತೆ ರಚಿತವಾಗಿರುವ ತನಿಖಾ ಸಮಿತಿಗಳು ಎಷ್ಟು? ಅದರ ತನಿಖಾ ಪ್ರಗತಿಯ ವಿವರಗಳು.

   **ನಿರ್ಣಯ:** ವಿಶ್ವವಿದ್ಯಾನಿಲಯದಲ್ಲಿ ವಿಚಾರಣೆಗೆ ಸಂಬಂಧಿಸಿ, ಬಾಕಿ ಇರುವ ತನಿಖಾ ಸಮಿತಿಗಳ ವಿವರಗಳನ್ನು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

3. ವಿಶ್ವವಿದ್ಯಾನಿಲಯವನ್ನು "ವಿದ್ಯಾರ್ಥಿ ಸ್ನೇಹಿ", "ಕೌಶಲ್ಯಭರಿತ ವಿದ್ಯಾರ್ಥಿ" ಯನ್ನಾಗಿ ರೂಪಿಸಲು ಯೋಜನೆ.

   **ನಿರ್ಣಯ:**ಮುಂದೂಡಲಾಯಿತು.

4. ರಾಷ್ಟ್ರೀಯ ಶಿಕ್ಷಣ ನೀತಿ ಬಗ್ಗೆ ವಿಶ್ವವಿದ್ಯಾನಿಲಯದಿಂದ ಮುಂದೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ.

   **ನಿರ್ಣಯ:**ಈ ಬಗ್ಗೆ ಈಗಾಗಲೇ ಕಾರ್ಯಸೂಚಿ ಸಂಖ್ಯೆ: **ಎಸಿಸಿ:ಸಾ.ಸ.4:14(2020)ರಲ್ಲಿ** ನಿರ್ಣಯ ಕೈಗೊಳ್ಳಲಾಗಿರುತ್ತದೆ.

**ಕಾರ್ಯಸೂಚಿ ಸಂಖ್ಯೆ:** **ಸಿಂಡಿಕೇಟ್:ಸಾ.ಸ.4:26(2020)**

**ವಿಷಯ:** Bringing administrative reforms in the University system to make process Owners accountableಎಂಬ ಪ್ರಸ್ತಾವನೆ ಕುರಿತು.

**ನಿರ್ಣಯ:** ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಿಂಡಿಕೇಟ್:ಸಾ.ಸ.4:27(2020)**

**ವಿಷಯ:** ಶ್ರೀ ರಮೇಶ್ ಕೆ., ಸಿಂಡಿಕೇಟು ಸದಸ್ಯರು, ಇವರು ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ ಮಾಡುವ ಬಗ್ಗೆ ಸಲ್ಲಿಸಿರುವ ಪ್ರಸ್ತಾವನೆ ಕುರಿತು.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಲ್ಲಿರುವ ಸ್ನಾತಕೋತ್ತರ ಪದವಿಗಳ ಅಂತಿಮ ವರ್ಷಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳಿಗೆ ಮತ್ತು ಎಸ್.ಸಿ./ಎಸ್.ಟಿ. ಸಂಶೋಧನಾ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡಿದಂತೆ, ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಾದ ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು, ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಮತ್ತು ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ''ಜ್ಞಾನ ಕಾವೇರಿ ಕ್ಯಾಂಪಸ್'', ಚಿಕ್ಕ ಅಳುವಾರ, ಕೊಡಗು ಇಲ್ಲಿನ ಸ್ನಾತಕೋತ್ತರ ಪದವಿಗಳ ಅಂತಿಮ ವರ್ಷಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳಿಗೆ ಮತ್ತು ಎಸ್.ಸಿ./ಎಸ್.ಟಿ. ಸಂಶೋಧನಾ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ ಮಾಡಬಹುದೆಂಬುದಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಡಿಇವಿ ಸಾ.ಸ.4:28(2020)**

**ವಿಷಯ:** CARER ಕೇಂದ್ರದ ವಿವಿಧ ಸೌಲಭ್ಯಗಳ ಬಳಕೆಗೆ ಸಂಬಂಧಿಸಿ ಮಾರ್ಗಸೂಚಿ ತಯಾರಿಸಲು ರಚಿಸಿದ ಸಮಿತಿ ಸಭೆಯ ನಡಾವಳಿಯ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಡಿಇವಿ ಸಾ.ಸ.4:29(2020)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ದೂರ ಶಿಕ್ಷಣ ಕಾರ್ಯಕ್ರಮವನ್ನು ಮುಂದುವರಿಸುವ ಬಗ್ಗೆ.

**ನಿರ್ಣಯ:** ರಾಷ್ಟ್ರೀಯ ಶಿಕ್ಷಣ ನೀತಿ 2020 ಮತ್ತು ಯುಜಿಸಿ ನಿಯಮಾವಳಿODL2020 ಯನ್ವಯ ಪ್ರಾದೇಶಿಕ ಅವಶ್ಯಕತೆಯನ್ನು ಗಮನಿಸಿ, ಸಾರ್ವಜನಿಕ ಹಿತಾಸಕ್ತಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ದೂರ ಶಿಕ್ಷಣ ಕಾರ್ಯಕ್ರಮವನ್ನು ಮುಂದುವರಿಸಲು ನಿರ್ಣಯಿಸಲಾಯಿತು. ಈ ಬಗ್ಗೆ ಯುಜಿಸಿ ಗೆ ಪ್ರಸ್ತಾವನೆ ಸಲ್ಲಿಸಲು ಸೂಕ್ತ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಡಿಇವಿ ಸಾ.ಸ.4:30(2020)**

**ವಿಷಯ:** 2020–21ನೇ ಸಾಲಿನ ಪದವಿ ವಿಭಾಗಗಳ ಮೊದಲನೇ ಮತ್ತು ಮೂರನೇ

ಚಾತುರ್ಮಾಸದ ತರಗತಿಗಳಿಗೆ ಪ್ರಸಾರಾಂಗ ಮೂಲಕ ಪಠ್ಯಪುಸ್ತಕ ಮುದ್ರಿಸಿ ಪ್ರಕಟಿಸುವ ಬಗ್ಗೆ.

**ನಿರ್ಣಯ:** ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಡಿಇವಿ ಸಾ.ಸ.4:31(2020)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಿರುವ ವಿವಿಧ ಅಧ್ಯಯನ ಪೀಠಗಳ ಮಾಹಿತಿ ಬಗ್ಗೆ.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಪೀಠಗಳ ಚಟುವಟಿಕೆಗಳ ಬಗ್ಗೆ ಚರ್ಚಿಸಿ, ರೂಪುರೇಷೆಗಳನ್ನು ತಯಾರಿಸಲು ಈ ಕೆಳಗಿನಂತೆ ಸಮಿತಿಯನ್ನು ರಚಿಸಲಾಯಿತು.

ಪ್ರೊ. ಡಿ. ಶಿವಲಿಂಗಯ್ಯ, ಸಿಂಡಿಕೇಟು ಸದಸ್ಯರು ಹಾಗೂ ಅಧ್ಯಕ್ಷರು – ಅಧ್ಯಕ್ಷರು
ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ
ಶ್ರೀ ರವಿಚಂದ್ರ ಪಿ. ಎಂ., ಸಿಂಡಿಕೇಟು ಸದಸ್ಯರು– ಸದಸ್ಯರು
ಶ್ರೀ ಕೆ. ರಮೇಶ್, ಸಿಂಡಿಕೇಟು ಸದಸ್ಯರು – ಸದಸ್ಯರು
ಡಾ. ಚಂದ್ರು ಹೆಗಡೆ, ವಿಶೇಷಾಧಿಕಾರಿ, ಕುಲಸಚಿವರ ಕಛೇರಿ –ಸಂಚಾಲಕರು

**ಕಾರ್ಯಸೂಚಿ ಸಂಖ್ಯೆ: ಆಡಳಿತ ಸಾ.ಸ.4:32(2020)**

**ವಿಷಯ:** ದಿವಂಗತ ಶ್ರೀಮತಿ ಮೋಹಿನಿ, ಸ್ವೀಪರ್–ಕಂ–ಕ್ಲೀನರ್, ಕುಲಸಚಿವರ ಕಛೇರಿ, ಮಂಗಳೂರು ವಿಶ್ವವಿದ್ಯಾನಿಲಯ ಇವರ ವೈದ್ಯಕೀಯ ವೆಚ್ಚ ಬಿಲ್ಲಿನ ಮರುಭರಣೆ ಬಗ್ಗೆ.

**ನಿರ್ಣಯ:** ವೈದ್ಯಕೀಯ ವೆಚ್ಚದ ವ್ಯತ್ಯಾಸದ ಮೊತ್ತವನ್ನು ಕಾನೂನಿನ ಚೌಕಟ್ಟಿನಲ್ಲಿ ಸಂಬಂಧಿತರಿಗೆ ಮರುಪಾವತಿಸಲುಸೂಕ್ತ ಕ್ರಮಕೈಗೊಳ್ಳಬೇಕೆಂದು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಡಿಇವಿ ಸಾ.ಸ.4:33(2020)**

**ವಿಷಯ:** ಗಣಕಯಂತ್ರ ಕೇಂದ್ರದ – ಸೈಬರ್ ಲ್ಯಾಬ್‌ನ 35 Mbps 4W MLLNಇಂಟರ್‌ನೆಟ್ ಪೋರ್ಟ್ ಶುಲ್ಕ ಪಾವತಿಸಿದ ಬಗ್ಗೆ.

**ನಿರ್ಣಯ:** ಘಟನೋತ್ತರವಾಗಿ ಅನುಮೋದಿಸಲಾಯಿತು. ಬಿಲ್ಲನ್ನು ಎಂಟು ತಿಂಗಳು ವಿಳಂಬವಾಗಿ ಸಲ್ಲಿಸಿರುವುದಕ್ಕೆ ಕಾರಣವನ್ನು ಸಂಬಂಧಿತರಿಂದ ಪಡೆಯಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ ಸಾ.ಸ.4:34(2020)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಯವರ ಕಾರ್ಯಾಲಯ, ಕುಲಸಚಿವರ ಕಛೇರಿ ಹಾಗೂ ಕುಲಸಚಿವ (ಪರೀಕ್ಷಾಂಗ)ರ ಕಚೇರಿಯ ವಿಶೇಷಾಧಿಕಾರಿಯವರ ನೇಮಕದ ಕುರಿತು.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಸಿಬ್ಬಂದಿ ಸಾ.ಸ.4:35(2020)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಅಳವಡಿಸಲಾಗಿರುವ ಸಿ.ಸಿ.ಟಿವಿ ಮತ್ತು ಬಯೋಮೆಟ್ರಿಕ್ ಹಾಗೂ ಸೋಲಾರ್ ಉಪಕರಣಗಳ ಪ್ರಕ್ರಿಯೆ, ಕಾರ್ಯಕ್ಷಮತೆ ಹಾಗೂ ಇದಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಆಂತರಿಕ ಪರಿಶೀಲನಾ ಸಮಿತಿಯು ಪರಿಶೀಲನೆ ನಡೆಸಿ ಸಲ್ಲಿಸಿದ ವರದಿಗಳ ಬಗ್ಗೆ.

**ನಿರ್ಣಯ:** ಆಂತರಿಕ ಪರಿಶೀಲನಾ ಸಮಿತಿಯ ವರದಿಯನ್ನು ಗಮನಿಸಲಾಯಿತು. ಪ್ರಕ್ರಿಯೆಯಲ್ಲಿ ಒಳಗೊಂಡ ಎಲ್ಲಾ ಅಧಿಕಾರಿಗಳು, ಸಿಬ್ಬಂದಿ, ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ನೋಟೀಸು ಜಾರಿ ಮಾಡಿ ಪ್ರಕರಣದ ಕುರಿತು ಎಲ್ಲಾ ಆಯಾಮಗಳಿಂದ ಸಮಗ್ರವಾದ ವಿಚಾರಣೆ / ತನಿಖೆ ನಡೆಸಲು ಸಿಂಡಿಕೇಟು ಸದಸ್ಯರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಪುನರ್‌ರಚನೆ ಮಾಡಲು ಹಾಗೂ ಅದರ ಕಾರ್ಯವ್ಯಾಪ್ತಿಯನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಿ, ನಮೂದಿಸಲು ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** **ಎಸಿಸಿ ಸಾ.ಸ.4:36(2020)**

**ವಿಷಯ:** ಕಾಸರಗೋಡು ಗಡಿನಾಡು ಕನ್ನಡಿಗರಿಗೆ ಅರ್ಹತಾ, ಪ್ರಮಾಣಪತ್ರ ವಿನಾಯಿತಿ ನೀಡುವ ಕುರಿತು –ಪ್ರಾಂಶುಪಾಲರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಕನ್ಯಾನ, ಶೈಕ್ಷಣಿಕ ಮಂಡಳಿ ಸದಸ್ಯರು ಇವರು ಸಲ್ಲಿಸಿರುವ ಪ್ರಸ್ತಾವನೆ

**ನಿರ್ಣಯ:** ಶೈಕ್ಷಣಿಕ ಮಂಡಳಿ ಸಭೆಯ ನಿರ್ಣಯವನ್ನು ಅನುಮೋದಿಸಲಾಯಿತು. COVID–19ರ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಈ ಒಂದು ಬಾರಿಗೆ ಮಾತ್ರ ಅನ್ವಯವಾಗುವಂತೆ ಯಾವುದೇ ದಂಡ ಶುಲ್ಕ ವಿಧಿಸಬಾರದೆಂದು ಸಹ ನಿರ್ಣಯಿಸಲಾಯಿತು. ಈಗಾಗಲೇ ಪಾವತಿಸಿರುವ ಹೆಚ್ಚುವರಿ ಶುಲ್ಕ ಅಥವಾ ದಂಡ ಶುಲ್ಕದ ಮರುಪಾವತಿಗಾಗಿ ಸಂಬಂಧಿತ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದಲ್ಲಿ ಸೂಕ್ತ ಕ್ರಮ ಕೈಗೊಳ್ಳಬಹುದಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಎಸಿಸಿ ಸಾ.ಸ.4:37(2020)**

**ವಿಷಯ:** ಸಂತ ಅಲೋಶಿಯಸ್ ಕಾಲೇಜು (ಸ್ವಾಯತ್ತ), ಮಂಗಳೂರು ಸಂಸ್ಥೆಯ ಪಿ.ಹೆಚ್.ಡಿ. ವ್ಯಾಸಂಗಕ್ಕೆ ಸಂಶೋಧನಾ ಕೇಂದ್ರವನ್ನಾಗಿ ಮಾನ್ಯತೆ ಮಾಡುವ ಬಗ್ಗೆ.

**ನಿರ್ಣಯ:** ಸಂಶೋಧನಾ ಕೇಂದ್ರವನ್ನು ಮಾನ್ಯತೆ ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಡಿಇವಿ ಸಾ.ಸ.4:38(2020)**

**ವಿಷಯ:** IQAC ಸಲಹಾ ಸಮಿತಿ ಸಭೆಯ ನಡಾವಳಿ ಹಾಗೂ 2018–19ರ ಕರಡು AQAR ಅನುಮೋದನೆ ಬಗ್ಗೆ.

**ನಿರ್ಣಯ:** ಈ ಬಗ್ಗೆ IQAC ನಿರ್ದೇಶಕರು ಮುಂದಿನ ಸಿಂಡಿಕೇಟು ಸಭೆಗೆ ಬಂದು ಮಾಹಿತಿ ನೀಡಲು ಸೂಕ್ತ ಕ್ರಮಕೈಗೊಳ್ಳುವಂತೆ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಪಿಎಂಇಬಿ ಸಾ.ಸ.4:39(2020)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ/ಕಚೇರಿಗಳಿಗೆ ಬೇಕಾಗಿರುವ Student Chairs, Stool, Tableಗಳನ್ನು ರೂಸಾ ಅನುದಾನದಿಂದ ಖರೀದಿಸುವ ಬಗ್ಗೆ.

**ನಿರ್ಣಯ:** ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ: ಪಿಎಂಇಬಿ ಸಾ.ಸ.4:40(2020)**
**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ/ಕಚೇರಿಗಳಿಗೆ ಬೇಕಾಗಿರುವ ಉಪಕರಣಗಳನ್ನು ರೂಸಾ ಅನುದಾನದಿಂದ ಖರೀದಿಸುವ ಬಗ್ಗೆ.
**ನಿರ್ಣಯ:** ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ: ಎಸಿಸಿ ಸಾ.ಸ.4:41(2020)**
**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಸಂಯೋಜಿತ ಕಾಲೇಜುಗಳಿಂದ ಶೈಕ್ಷಣಿಕ ವರ್ಷ 2014–15ನೇ ಸಾಲಿನಿಂದ ಸಂಗ್ರಹಿಸಿರುವ ಸಂಯೋಜನಾ/ಸೇವಾ ಶುಲ್ಕದ ಮೇಲೆ Service Tax ಹಾಗೂ ಶೈಕ್ಷಣಿಕ ವರ್ಷ 2017–18ನೇ ಸಾಲಿನಿಂದ ಸಂಗ್ರಹಿಸಿರುವ ಸಂಯೋಜನಾ/ಸೇವಾ ಶುಲ್ಕದ ಮೇಲೆ GST ಪಾವತಿಸುವ ಕುರಿತು.
**ನಿರ್ಣಯ:** ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ: ಡಿಇವಿ ಸಾ.ಸ.4:42(2020)**
**ವಿಷಯ:** ಹೊಸ ಕಟ್ಟಡದಲ್ಲಿ ವಿಶ್ವವಿದ್ಯಾನಿಲಯ ಕಾಲೇಜು, ನೆಲ್ಯಾಡಿ ಇದನ್ನು ಮುಂದುವರಿಸುವ ಬಗ್ಗೆ.
**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಡಿಇವಿ ಸಾ.ಸ.4:43(2020)**
**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗ/ಕಚೇರಿಗಳಿಗೆ ಇಂಟರ್‌ನೆಟ್ ಅಳವಡಿಸಲು ಅಗತ್ಯವಿರುವ UTP/OFC Networking item ಗಳ ದರಗಳನ್ನು ಒಂದು ವರ್ಷದ ಅವಧಿಗೆ ನಿಗದಿಪಡಿಸಿ ಖರೀದಿಸುವ ಪ್ರಸ್ತಾವನೆ ಬಗ್ಗೆ.
**ನಿರ್ಣಯ:** ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ: ಡಿಇವಿ ಸಾ.ಸ.4:44(2020)**
**ವಿಷಯ:** ಭೌತಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯದ, DSTFIST Programme– ಉಪಕರಣಗಳ ಖರೀದಿಯ ಪ್ರಸ್ತಾವನೆ ಬಗ್ಗೆ.
**ನಿರ್ಣಯ:** ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ: ಡಿಇವಿ ಸಾ.ಸ.4:45(2020)**
**ವಿಷಯ:** DST SERB ಪ್ರೊಜೆಕ್ಟ್, ಸೂಕ್ಷ್ಮಾಣುಜೀವವಿಜ್ಞಾನ ವಿಭಾಗ, ಜ್ಞಾನಕಾವೇರಿ, ಚಿಕ್ಕ ಅಳುವಾರ – ಉಪಕರಣ ಖರೀದಿಯ ಪ್ರಸ್ತಾವನೆ ಬಗ್ಗೆ.
**ನಿರ್ಣಯ:** ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ: ಡಿಇವಿ ಸಾ.ಸ.4:46(2020)**
**ವಿಷಯ:** 2020-21 ನೇ ಸಾಲಿಗೆ ಮಂಗಳೂರು ವಿಶ್ವವಿದ್ಯಾನಿಲಯದ ವೈ–ಫೈ ನೆಟ್‌ವರ್ಕಿಂಗ್

ಐಟಮ್‌ನ ವಾರ್ಷಿಕ ನಿರ್ವಹಣಾ ವೆಚ್ಚಕ್ಕೆ ಮಂಜೂರಾತಿ ನೀಡುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಡಿಇವಿ ಸಾ.ಸ.4:47(2020)**

**ವಿಷಯ:** ಗಣಕ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯದ 2020–21ನೇ ಸಾಲಿಗೆ ನೆಟ್ ವರ್ಕಿಂಗ್ ಐಟಮ್‌ನ ವಾರ್ಷಿಕ ನಿರ್ವಹಣ ವೆಚ್ಚಕ್ಕೆ ಮಂಜೂರಾತಿ ನೀಡುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಡಿಇವಿ ಸಾ.ಸ.4:48 (2020)**

**ವಿಷಯ:** ದೂರ ಶಿಕ್ಷಣ ಕೇಂದ್ರದ ಬಿ.ಎಡ್. ಒಡಿಯಲ್ ಕಾರ್ಯಕ್ರಮದ ಅಧ್ಯಯನ ಸಾಮಾಗ್ರಿಗಳನ್ನು ಮುದ್ರಿಸಿ ಸರಬರಾಜು ಮಾಡುವ ಟೆಂಡರ್ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಡಿಇವಿ ಸಾ.ಸ.4:49 (2020)**

**ವಿಷಯ:** DST SERBಪ್ರಾಜೆಕ್ಟ್, ಜೀವರಸಾಯನಶಾಸ್ತ್ರ ವಿಭಾಗ, ಜ್ಞಾನ ಕಾವೇರಿ, ಚಿಕ್ಕ ಅಳುವಾರ – ಉಪಕರಣ ಖರೀದಿ ಬಗ್ಗೆ.

**ನಿರ್ಣಯ:** ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಎಸಿಸಿ ಸಾ.ಸ.4:50 (2020)**

**ವಿಷಯ:** ಶೈಕ್ಷಣಿಕ ವರ್ಷ 2020–21ನೇ ಸಾಲಿಗೆ ಕಾಲೇಜುಗಳ ಸಂಯೋಜನೆಯ ಕುರಿತು.

**ನಿರ್ಣಯ:** ಮುಂದೂಡಲಾಯಿತು.

**ಇತರ ವಿಷಯಗಳು**

1. ಮಂಗಳೂರು ವಿಶ್ವವಿದ್ಯಾನಿಲಯದ ಸ್ಥಳೀಯ ವಿಚಾರಣಾ ಸಮಿತಿಯು ಡಾ. ಜಿ. ಶಂಕರ್ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಅಜ್ಜರಕಾಡು, ಉಡುಪಿ ಇಲ್ಲಿಗೆ ದಿನಾಂಕ 10.09.2020ರಂದು ಭೇಟಿ ನೀಡಿದ ಸಂದರ್ಭದಲ್ಲಿ ಸದರಿ ಕಾಲೇಜಿನ ಪ್ರಾಂಶುಪಾಲರು ದುರ್ವರ್ತನೆ ಮತ್ತು ಅಸಹಕಾರ ತೋರಿದ ಬಗ್ಗೆ ಸದರಿ ಸ್ಥಳೀಯ ವಿಚಾರಣಾ ಸಮಿತಿ ಸದಸ್ಯರಾದ ಪ್ರೊ. ಕರುಣಾಕರ್ ಎ. ಕೋಟೆಗಾರ್ ಇವರು ಸಿಂಡಿಕೇಟು ಸಭೆಗೆ ಮಾಹಿತಿ ನೀಡಿದ ಹಿನ್ನೆಲೆಯಲ್ಲಿಸದರಿ ಕಾಲೇಜಿನ ಪ್ರಾಂಶುಪಾಲರಿಂದ ಸೂಕ್ತ ವಿವರಣೆಗಳನ್ನು ಪಡೆದುಕೊಂಡು ಮುಂದಿನ ಕ್ರಮ ಕೈಗೊಳ್ಳುವಂತೆ ನಿರ್ಣಯಿಸಲಾಯಿತು.

2. ಡಾ. ಎ. ಅಣ್ಣಯ್ಯ ರಮೇಶ್ ಇವರು ಸರ್ಕಾರಿ ನೌಕರರ ಶಿಸ್ತಿಗೆ ಸಂಬಂಧಿಸಿದ ನಿಯಮಗಳನ್ನು ಉಲ್ಲಂಘಿಸಿ ತೋರಿದ ಅಶಿಸ್ತಿನ ನಡವಳಿಕೆಯ ಬಗ್ಗೆ ಇಲಾಖಾ ವಿಚಾರಣೆ ನಡೆಸಲು ಸಿಂಡಿಕೇಟು ನಿರ್ಣಯಿಸಿತು.
3. 2020–21ನೇ ಸಾಲಿನ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳ ಪ್ರವೇಶಾತಿ ಅನುಮೋದನೆಯನ್ನು ಈಗಾಗಲೇ ಪ್ರವೇಶಾತಿ ಅನುಮೋದನೆಯನ್ನು ನಡೆಸಿಕೊಡುತ್ತಿರುವ ಮೆ. ಲ್ಯಾಟ್ರಿಸ್ ಟೆಕ್ನಾಲಜೀಸ್ ಇವರಿಗೆ ನೀಡಲು ಸೂಕ್ತ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.

4. ದಿನಾಂಕ 09.10.2020 ರಂದು ಮುಂದಿನ ಸಿಂಡಿಕೇಟ್ ಸಭೆ ನಡೆಸಲು ಸೂಕ್ತ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.

ಮಾನ್ಯ ಕುಲಪತಿಗಳು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/– | ಸಹಿ/– |
| ಕುಲಸಚಿವರು | ಕುಲಪತಿಗಳು. |